# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ

**ಸಿ.ಸಿ.ನಂ.797/2020**

.....ಫಿರ್ಯಾದಿದಾರ

1) ಮಾದಪ್ಪ ಉರ್ಫ ಮಹದೇವ ಪರಪ್ಪ ತಾನಪ್ಪಗೋಳ,
ಜಮಖಂಡಿ.

- ವಿರುದ್ಧ -

1) ಯಲ್ಲಪ್ಪ ದುಂಡಪ್ಪ ಬಾಗಿ,
ಸಾಃ ಬನಹಟ್ಟಿ.

......ಆರೋಪಿತರು

## - ಆಪಾದನೆ -

ನಾನು ಶ್ರೀಮತಿ.ಶುಷ್ಮ ಟಿ.ಸಿ. ಬಿ.ಕಾಂ, ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ದಿನಾಂಕ 01-06-2017 ರಿಂದ 19-02-2018 ರವರೆಗೆ ಎಸ್ ಟಿ ಸಿ ಕಾಲೇಜ್ ಬನಹಟ್ಟಿಯ ಪ್ರಭಾರ ಪ್ರಾಚಾರ್ಯರು ಆಗಿದ್ದ ಫಿರ್ಯಾದುದಾರರಿಂದ ಆರೋಪಿಯಾದ ನೀವು ಪಡೆದಿದ್ದ ಸಾಲದ ಮೊತ್ತ ರೂ.15,000/- ಗಳನ್ನು ಹಿಂತಿರುಗಿಸಬೇಕಾಗುತ್ತದೆ ಎಂದು, ನೀವು ಫಿರ್ಯಾದುದಾರರಿಗೆ ನಿಮ್ಮ ಪಿಂಚಣಿ ಹಣಕ್ಕಾಗಿ ಸಲ್ಲಿಸಿದ್ದ ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಡಲು ಫಿರ್ಯಾದಿದಾರರು ನಿಮಗೆ ರೂ.25,000/- ಗಳ ಲಂಚಕ್ಕೆ ಬೇಡಿಕೆ ಇಟ್ಟಿದ್ದರು, ಅದಕ್ಕೆ ನೀವು ರೂ.10,000/- ಗಳ ನಗದು ನೀಡಿದ್ದು ಮತ್ತು ಉಳಿದ ಹಣ ರೂ.15,000/- ಕ್ಕೆ ಚೆಕ್ಕನ್ನು ನೀಡಿರುವುದಾಗಿ ಹೇಳಿ ದಿನಾಂಕ 02-04-2018 ರಂದು ಚೇರಮನ್, ಎಸ್ ಟಿ ಸಿ ಕಾಲೇಜ್ ಇವರಿಗೆ ಫಿರ್ಯಾದುದಾರರ ಮೇಲೆ ಖೊಟ್ಟಿಯಾಗಿ ಪತ್ರ ಬರೆದಿದ್ದು, ಇಂತಹ ಪತ್ರವನ್ನು ಎಸ್ ಟಿ ಸಿ ಕಾಲೇಜಿನ ಪ್ರಿನ್ಸಿಪಲ್ ಮತ್ತು ಕಮಿಟಿಯ ಸದಸ್ಯರ ಮುಂದೆ ಇಡಲಾಗುತ್ತದೆ ಮತ್ತು ಇದರಿಂದ ಫಿರ್ಯಾದುದಾರರ ಗೌರವಕ್ಕೆ ಧಕ್ಕೆ ಉಂಟಾಗುತ್ತದೆ ಎಂದು ತಿಳಿದಿದ್ದರೂ ಸಹ, ಫಿರ್ಯಾದಿದಾರರು ನಿಮ್ಮಿಂದ ಯಾವುದೇ ಲಂಚದ ಬೇಡಿಕೆ ಇಟ್ಟಿಲ್ಲದೇ ಇದ್ದರೂ ಸಹ ಅವರ ಮೇಲೆ ಖೊಟ್ಟಿಯಾಗಿ ಫಿರ್ಯಾದುದಾರರು ರೂ.25,000/- ಗಳ ಲಂಚದ ಬೇಡಿಕೆ ಇಟ್ಟಿದ್ದರು ಎಂದು ಚೇರಮನರವರಿಗೆ ಪತ್ರ ಬರೆದು ಫಿರ್ಯಾದುದಾರರ ಗೌರವಕ್ಕೆ ಧಕ್ಕೆ ಉಂಟು ಮಾಡಿದ ಅಪರಾಧ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.500 ರ ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ- ತಿಳಿಯಿತು

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ- ಸುಳ್ಳು - ವಿಚಾರಣೆಯಾಗಬೇಕು.

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

[signature] 10/5/22

ಪ್ರ.ದ.ನ್ಯಾ. ದಂಡಾಧಿಕಾರಿಗಳು ,
ಬನಹಟ್ಟಿ.

ಸ್ಥಳಃ ಬನಹಟ್ಟಿ
ದಿನಾಂಕಃ 10-05-2022

ಆರೋಪಿತನ ಸಹಿಃ
[signature] (Y.D. Bagi) 10/V/22